ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1602(1858)
ವಿಧಾನ ಪರಿಷತ್ತಿನ ಸದಸ್ಯರ ಹೆಸರು	:	ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ	:	22-03-2021
ಉತ್ತರಿಸಬೇಕಾದ ಸಚಿವರು	:	ಮಾನ್ಯ ಪ್ರವಾಸೋದ್ಯಮ, ಪರಿಸರ ಮತ್ತು ಜೀವಿಪರಿಸ್ಥಿತಿ ಸಚಿವರು.

ಸಂಖ್ಯೆ	ಪ್ರಶ್ನೆ	ಉತ್ತರ
ಅ)	ಹೊರ ರಾಷ್ಟ್ರಗಳಿಂದ 2ನೇ ಹಂತದ ಉಪಯೋಗಕ್ಕಾಗಿ ಬಳಕೆಯಾದ ಎಲೆಕ್ಟ್ರಾನಿಕ್ ಉಪಕರಣಗಳು ಕರ್ನಾಟಕ ರಾಜ್ಯಕ್ಕೆ ಸ್ವೀಕೃತವಾಗುತ್ತಿವೆಯೇ; ಈ ಉಪಕರಣಗಳು E-waste (Electronic Waste)ಎಂದು ವರ್ಗೀಕರಣವಾಗುವುದಿಲ್ಲವೇ; (ವಿವರ ನೀಡುವುದು)	2ನೇ ಹಂತದ ಬಳಕೆಗಾಗಿ ಹೊರ ರಾಷ್ಟ್ರಗಳಿಂದ ಕರ್ನಾಟಕ ರಾಜ್ಯಕ್ಕೆ ಸ್ವೀಕೃತವಾಗುತ್ತಿರುವ ಎಲೆಕ್ಟ್ರಾನಿಕ್ ಉಪಕರಣಗಳು ರಾಜ್ಯ ಸರ್ಕಾರದ ಕಾರ್ಯವ್ಯಾಪ್ತಿಗೆ ಬರುವುದಿಲ್ಲ. ವಿದ್ಯುನ್ಮಾನ ತ್ಯಾಜ್ಯ (ನಿರ್ವಹಣೆ) ನಿಯಮಗಳು, 2016 ರ ಪ್ರಕಾರ e- waste ಎಂದರೆ ಶೆಡ್ಯೂಲ್ –1ರಲ್ಲಿ ಪಟ್ಟಿ ಮಾಡಲಾದ ಉಪಕರಣಗಳಿಗೆ ಸಂಬಂಧಿಸಿದ "ಬಳಕೆದಾರರು ಮತ್ತು ಬೃಹತ್ ಬಳಕೆದಾರರಿಂದ ತ್ಯಾಜ್ಯವಾಗಿ ತ್ಯಜಿಸಲಾದ ಹಾಗೂ ಉಪಕರಣಗಳ ತಯಾರಿಕೆಯ ಸಮಯದಲ್ಲಿ ತಿರಸ್ಕೃತವಾಗುವ ಹಾಗೂ ನವೀಕರಣ ಮತ್ತು ದುರಸ್ತಿ ಪ್ರಕ್ರಿಯೆ ಸಮಯದಲ್ಲಿ ಉತ್ಪತ್ತಿಯಾಗುವ ಪೂರ್ತಿ ಅಥವಾ ಭಾಗಶಃ ವಿದ್ಯುತ್ ಅಥವಾ ವಿದ್ಯುನ್ಮಾನ ಉಪಕರಣಗಳ ತ್ಯಾಜ್ಯ" ಎಂದು ತಿಳಿಸಲಾಗಿದೆ. ಆದ್ದರಿಂದ 2ನೇ ಹಂತದಲ್ಲಿ ಉಪಯೋಗಕ್ಕಾಗಿ ಬಳಕೆಯಾಗುವ ಎಲೆಕ್ಟ್ರಾನಿಕ್ ಉಪಕರಣಗಳು e-waste (ವಿದ್ಯುನ್ಮಾನ ತ್ಯಾಜ್ಯ) ಅಲ್ಲವೆಂದು ಕಾನೂನಾತ್ಮಕವಾಗಿ ವ್ಯಾಖ್ಯಾನ (Interpretation) ಮಾಡಲಾಗಿದೆ.
ಆ)	ರಾಜ್ಯದಲ್ಲಿ ಪ್ರತಿ ವರ್ಷ ಉತ್ಪನ್ನವಾಗುವ E-waste ಎಷ್ಟು; (ಕಳೆದ 3 ವರ್ಷದ ಜಿಲ್ಲಾವಾರು ವಿವರ ನೀಡುವುದು) ಈ ರೀತಿ ವರ್ಗೀಕರಿಸಿದ E-wasteನಲ್ಲಿ ಅಂದಾಜು ಎಷ್ಟು ಪ್ರಮಾಣದಷ್ಟು E-	ರಾಜ್ಯದಲ್ಲಿ ಪ್ರತಿ ವರ್ಷ ಉತ್ಪಾದನೆಯಾಗುವ E-waste ಮಾಹಿತಿ ಬಗ್ಗೆ ಅಧ್ಯಯನ (Inventarization) ಮಾಡಲು ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ (ಎಂಪ್ರಿ) ಇವರಿಗೆ ವಹಿಸಲಾಗಿರುತ್ತದೆ. E- waste ನ್ನು ಅಧಿಕೃತವಾಗಿ ಕರ್ನಾಟಕ ರಾಜ್ಯ

<table>
<tr><td></td><td>waste ನ್ನು ಮರುಬಳಕೆಯಾಗುತ್ತಿದೆ ಮತ್ತು ಪರಿಷ್ಕೃತವಾಗಿರುತ್ತದೆ; ಇದರಲ್ಲಿ ಬಹುತೇಕ ಭಾಗ ಅಸಂಘಟಿತ ವಲಯದಲ್ಲಿ ಇದ್ದು, ಈ ಸಮಸ್ಯೆ ಆತಂಕಕಾರಿಯಾಗಿರುವುದು ರಾಜ್ಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಕೈಗೊಂಡ ಕ್ರಮಗಳ ಬಗ್ಗೆ ವಿವರ ನೀಡುವುದು;</td><td>ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಅನುಮತಿ ಪಡೆದಿರುವ ಮರುಬಳಕೆ ಸಂಸ್ಕರಣಾ ಘಟಕಗಳ ಮಾಹಿತಿಯು ಮಂಡಳಿಯಲ್ಲಿ ಲಭ್ಯವಿದ್ದು, ಕಳೆದ 3 ವರ್ಷಗಳಲ್ಲಿ ಇ–ತ್ಯಾಜ್ಯ ಸಂಸ್ಕರಿಸಿದ ಮಾಹಿತಿಯು ಈ ಕೆಳಕಂಡಂತಿರುತ್ತದೆ.
<table>
<tr><th>ವರ್ಷ</th><th>ಪ್ರಮಾಣMT/A</th></tr>
<tr><td>2016–17</td><td>4287.36</td></tr>
<tr><td>2017–18</td><td>7214.70</td></tr>
<tr><td>2018–19</td><td>9294.9695</td></tr>
</table></td></tr>
<tr><td>ಇ)</td><td>ಈ ಬಗ್ಗೆ ಕೇಂದ್ರ ಅಥವಾ ರಾಜ್ಯ ಸರ್ಕಾರವಾಗಲೀ ಅಥವಾ ಕೇಂದ್ರೀಯ ಮಾಲಿನ್ಯ ನಿಯಂತ್ರಣ ಮಂಡಳಿ ಅಥವಾ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (KSPCB) e-waste ನಲ್ಲಿ ಯಾವ ಬಗೆಯ e-waste ನ್ನು ಪರಿಸರ ಮತ್ತು ವಾಯು ಮಾಲಿನ್ಯವಿಲ್ಲದೆ ಹಾಗೂ ಆರೋಗ್ಯಕ್ಕೆ ಹಾನಿಕರವಾಗದೆ ಮರುಬಳಕೆ ಮತ್ತು ಪರಿಷ್ಕರಿಸಬಹುದು ಎಂದು ಮಾರ್ಗದರ್ಶನವುಳ್ಳ ಅಧಿಸೂಚನೆ ಹೊರಡಿಸಿದೆಯೇ; (ವಿವರ ನೀಡುವುದು)</td><td>ಕೇಂದ್ರೀಯ ಮಾಲಿನ್ಯ ನಿಯಂತ್ರಣ ಮಂಡಳಿಯು ಇ–ತ್ಯಾಜ್ಯ ನಿಯಮಗಳು, 2016 ರ ಅನುಷ್ಠಾನದ ಬಗ್ಗೆ ಮಾರ್ಗಸೂಚಿಗಳನ್ನು 2016ರಲ್ಲಿ ಹೊರಡಿಸಿದ್ದು, ಇದರಲ್ಲಿ ಪರಿಸರ ಸ್ನೇಹಿ ಮತ್ತು ವಾಯು ಮಾಲಿನ್ಯರಹಿತವಾಗಿ ಮರುಬಳಕೆ, ಸಂಗ್ರಹಣೆ, ಸಾಗಾಣೆ ಮತ್ತು ಇತರೆ ಅಂಶಗಳನ್ನು ಕುರಿತು ವಿವರ ನೀಡಲಾಗಿದೆ.</td></tr>
<tr><td>(ಈ)</td><td>ಕೇಂದ್ರ ಸರ್ಕಾರದ CPCB ರೂಪಿಸಿರುವ ನಿಯಮಗಳನ್ನು ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ರೂಪಿಸಿರುವ ಮಾರ್ಗದರ್ಶನಗಳ ಉಲ್ಲಂಘನೆ ಪ್ರಕರಣಗಳೆಷ್ಟು; ಇಂತಹ ಪ್ರಕರಣಗಳಲ್ಲಿ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು)</td><td>ಕೇಂದ್ರ ಸರ್ಕಾರದ CPCB ರೂಪಿಸಿರುವ ನಿಯಮಗಳನ್ನು ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ರೂಪಿಸಿರುವ ಮಾರ್ಗದರ್ಶನಗಳ ಉಲ್ಲಂಘನೆ ಮಾಡಿರುವ ಪ್ರಕರಣಗಳು ದಾಖಲಾಗಿರುವುದಿಲ್ಲ.</td></tr>
</table>

<table>
<tr>
<td>(ಉ)</td>
<td>ಒಟ್ಟಾರೆ ರಾಜ್ಯದಲ್ಲಿ ಆಧುನಿಕ ರೀತಿಯಲ್ಲಿ e-waste ಸಂಗ್ರಹ, ನಿರ್ವಹಣೆ ಮತ್ತು ವಿಲೇವಾರಿ ಬಗ್ಗೆ ರೂಪಿಸಿರುವ ಮೇಲುಸ್ತುವಾರಿ ಮತ್ತು ಮೂಲ ಸೌಕರ್ಯದ ವ್ಯವಸ್ಥೆಗಳೇನು;</td>
<td>ರಾಜ್ಯದಲ್ಲಿ ಇ- ತ್ಯಾಜ್ಯ ಸಂಗ್ರಹ ನಿರ್ವಹಣೆ ಮತ್ತು ವಿಲೇವಾರಿ ಮಾಡಲು ಈ ಕೆಳಕಂಡ ಮೂಲಸೌಕರ್ಯ ವ್ಯವಸ್ಥೆಗಳನ್ನು ಮಾಡಲಾಗಿದೆ.
<table>
<tr><th>ಕ್ರ ಸಂ.</th><th>ಕಾರ್ಯಚಟುವಟಿಕೆ</th><th>ಘಟಕಗಳ ಸಂಖ್ಯೆ</th></tr>
<tr><td>1</td><td>ಸಂಗ್ರಹಣಾ ಘಟಕಗಳು</td><td>50</td></tr>
<tr><td>2</td><td>ನವೀಕರಣ ಘಟಕಗಳು</td><td>04</td></tr>
<tr><td>3</td><td>ಮರುಬಳಕೆ ಘಟಕಗಳು</td><td>19</td></tr>
<tr><td>4</td><td>ನವೀಕರಣ ಮತ್ತು ಮರು ಬಳಕೆ ಘಟಕಗಳು</td><td>04</td></tr>
<tr><td>5</td><td>ಬೇರ್ಪಡಿಕೆ ಘಟಕಗಳು</td><td>33</td></tr>
<tr><td>6</td><td>ಬೇರ್ಪಡಿಕೆ ಮತ್ತು ನವೀಕರಣ ಘಟಕಗಳು</td><td>09</td></tr>
<tr><td>7</td><td>ಬೇರ್ಪಡಿಕೆ, ನವೀಕರಣ ಮತ್ತು ಮರುಬಳಕೆ ಘಟಕಗಳು</td><td>04</td></tr>
<tr><td>8</td><td>ಬೇರ್ಪಡಿಕೆ ಮತ್ತು ಮರುಬಳಕೆ ಘಟಕಗಳು</td><td>13</td></tr>
<tr><td></td><td>ಒಟ್ಟು</td><td>136</td></tr>
</table>
</td>
</tr>
<tr>
<td>(ಊ)</td>
<td>ಈ ದಿಸೆಯಲ್ಲಿ ಕೌಶಲ್ಯಾಭಿವೃದ್ಧಿ ಇಲಾಖೆಯ ಕುಶಲತೆ ಮತ್ತು ಪರಿಣತಿಯನ್ನು ಬಳಸಿಕೊಳ್ಳುವ ಆಲೋಚನೆ ಇದೆಯೇ?</td>
<td>ಈ ರೀತಿಯ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.</td>
</tr>
</table>

ಸಂಖ್ಯೆ: ಅಪಜೀ 17 ಇಎನ್‌ಜಿ 2021

(ಸಿ.ಪಿ. ಯೋಗೇಶ್ವರ)
ಪ್ರವಾಸೋದ್ಯಮ ಹಾಗೂ ಪರಿಸರ ಮತ್ತು
ಜೀವಿಪರಿಸ್ಥಿತಿ ಸಚಿವರು.